◆ **ಕಳೆದ ನೂರು ವರ್ಷದ ಕನ್ನಡ ಬರವಣಿಗೆಯನ್ನು ಗಮನಿಸಿದರೆ ಯಾವ ಕಾಲದ ಬರವಣಿಗೆ ಅತ್ಯುತ್ತಮ ಅನಿಸುತ್ತದೆ?**

ನಾನು ಸಾಹಿತ್ಯದ ವಿದ್ಯಾರ್ಥಿನಿ ಅಲ್ಲವಾದ ಕಾರಣ ನನ್ನ ಮಿತಿಗಳನ್ನು ಒಪ್ಪಿಕೊಂಡೇ, ನನ್ನ ಅನಿಸಿಕೆಯನ್ನು ಹೇಳಬಯಸುತ್ತೇನೆ. ನನಗೆ 1980ರ ದಶಕ ಅತ್ಯಂತ ವೈಬ್ರಾಂಟ್ ಆಗಿತ್ತು ಎನಿಸುತ್ತದೆ. ಆಳುವವರು, ಗೆದ್ದವರದಷ್ಟೇ ಇತಿಹಾಸ ಬರೆದಿದ್ದು, ಮೇಲ್ವರ್ಗ, ಮೇಲ್ಜಾತಿಯ ದೃಷ್ಟಿಕೋನದ ಬರಹಗಳೇ ತುಂಬಿ ಹೋದ ಏಕಮುಖ ಚರಿತ್ರೆಗೆ ಸವಾಲು ಎಸೆಯುವಂತೆ ಮಹಿಳೆಯರು, ದಲಿತರು, ಅಂಚಿಗೆ ತಳ್ಳಲ್ಪಟ್ಟವರು ಬಂಡೆದ್ದು ಬರೆದರು, ಪ್ರಶ್ನಿಸಿದರು, ವಾದಿಸಿದರು, ಚರ್ಚಿಸಿದರು, ನಮ್ಮ ಅರಿವಿನ ಸರಹದ್ದನ್ನು ಹಿಗ್ಗಿಸಿದರು.

**ಹೊಸ ಮಾಹಿತಿಗಳು ಅಮೂಲ್ಯ. ಇಂತಹ ದಾಖಲೀಕರಣ ಇಲ್ಲದಿದ್ದರೆ, ಈ ಮಾಹಿತಿಗಳು ನಷ್ಟವಾಗಿಬಿಡುತ್ತಿತ್ತು ಅನಿಸುವುದಿಲ್ಲವೆ?**

ಸಾಹಿತ್ಯ, ವಿಜ್ಞಾನ, ವೈದ್ಯಕೀಯ, ವೈಮಾನಿಕ ಯಾವುದೇ ರಂಗವನ್ನು ತೆಗೆದುಕೊಳ್ಳಿ, ಮಹಿಳೆಯರ ಸಾಧನೆಗಳು ಚರಿತ್ರೆಯಲ್ಲಿ ಬಿಟ್ಟುಹೋಗಿವೆ. ಚರಿತ್ರೆಯಲ್ಲಿ ಮಹಿಳೆ ಅದೃಶ್ಯವಾಗಿದ್ದಾಳೆ. ಇತಿಹಾಸದ ಈ ಮೌನಗಳನ್ನು, ಅನುಪಸ್ಥಿತಿಗಳನ್ನು ಅರ್ಥೈಸುವ ಪ್ರಯತ್ನಗಳು ಜಗತ್ತಿನ ಎಲ್ಲೆಡೆಯಲ್ಲಿಯೂ ಕಳೆದ ಕೆಲವು ದಶಕಗಳಲ್ಲಿ ಕಂಡು ಬಂತು. ವಿಜ್ಞಾನ ಮತ್ತು ಸಾಹಿತ್ಯ ಎರಡೂ ರಂಗದಲ್ಲಿ ಇರುವ ನನಗೆ ಇಂತಹ ಪ್ರಯತ್ನ ಮಾಡುವುದು ನನ್ನ ಕರ್ತವ್ಯ ಅನಿಸಿತ್ತು.

ನಾನು ಶಾಲೆ ಓದಿದ ಕಾಲದಲ್ಲಿ ನನ್ನೆದುರು ಸ್ಫೂರ್ತಿ ನೀಡುವಂತಹ ಮಹಿಳಾ ಮಾದರಿಗಳಿರಲಿಲ್ಲ.

ನಲವತ್ತು ವರ್ಷಗಳಿಗೂ ಹಿಂದೆ, ಎಂಜಿನಿಯರಿಂಗ್ ರಂಗವನ್ನು ಪ್ರವೇಶಿಸುವಾಗ ನನ್ನಲ್ಲಿ ಸಾಕಷ್ಟು ಅಳುಕು ಆತಂಕವಿತ್ತು. 'ಇವೆಲ್ಲ ಹೆಂಗಸರ ರಂಗವಲ್ಲ. ಕಾರ್ಪೆಂಟ್ರಿ ಇರುತ್ತೆ, ಫೌಂಡ್ರಿ ಇದೆ, ಮಷೀನ್ ಶಾಪ್ ಇರುತ್ತೆ' ಎಂದೆಲ್ಲ ಹೆದರಿಸಿದವರಿದ್ದರು. ಅಳುಕುತ್ತಾ ಒಳಹೊಕ್ಕ ನಾನು ಮತ್ತು ನನ್ನ ಗೆಳತಿ ವಿಶ್ವವಿದ್ಯಾಲಯಕ್ಕೆ ರ್‍ಯಾಂಕ್ ಪಡೆದು ಹೊರಬಂದಾಗಲೆ, ಅಲ್ಲಿ ಹೆಣ್ಣುಮಕ್ಕಳಿಗೆ ಅಸಾಧ್ಯವಾದದ್ದು ಏನೂ ಇಲ್ಲವೆಂದು ತಿಳಿದದ್ದು! ನನ್ನೆದುರು ಇಲ್ಲದಿದ್ದ ಮಹಿಳಾ ಸಾಧಕಿಯರ ಮಾದರಿಗಳನ್ನು ನನ್ನ ಮುಂದಿನ ಪೀಳಿಗೆಯ ಹೆಣ್ಣುಮಕ್ಕಳ ಮುಂದೆ ಇಡುವ ಅದಮ್ಯ ಆಸೆಯೂ ನನ್ನ ಬರಹಗಳಿಗೆ ಪ್ರೇರಕವಾಯಿತು.

ಯಾವುದೇ ವಲಯದಲ್ಲೂ ಮಹಿಳೆಯರು ಚರಿತ್ರೆಯಲ್ಲಿ ಬಿಟ್ಟುಹೋಗಿರುವುದು ಆಕಸ್ಮಿಕವಲ್ಲ ಎನಿಸಿತು. ಇತಿಹಾಸದಲ್ಲಿ ಕಳೆದು ಹೋದ ಮಹಿಳಾ ವಿಜ್ಞಾನಿಗಳನ್ನು, ವೈಮಾನಿಕರನ್ನು ಹೊರ ತೆಗೆದು ಸ್ತ್ರೀ ಪರಂಪರೆಯನ್ನು ಪರಿಚಯಿಸುವ ಯತ್ನ ನನ್ನ ಗೀಳಾಯಿತು, ನನ್ನ ಅಧ್ಯಯನ ಮತ್ತು ಬರಹದ ವಸ್ತುವಾಯಿತು. ಇದಕ್ಕಾಗಿ ಮಾಹಿತಿ ಸಂಗ್ರಹ ಮತ್ತು ದಾಖಲೀಕರಣ ಪ್ರಕ್ರಿಯೆಯಲ್ಲಿ ತೊಡಗಿಕೊಂಡಾಗಿನ ನನ್ನ ಅನುಭವಗಳು ಅನೇಕ. ಹಲವು ಅಲೆದಾಟಗಳಲ್ಲಿ ನಿರಾಶೆಯ ಜೊತೆಗೆ ರೋಮಾಂಚನದ ಕ್ಷಣಗಳೂ ಇದ್ದವು.

◆ **ಎಚ್.ಎ.ಎಲ್.ನ ಹೆಲಿಕಾಪ್ಟರ್ ಡಿಸೈನ್ ಬ್ಯೂರೋದಲ್ಲಿ 'ಏವಿಯಾನಿಕ್ಸ್, ಮೆಷಿನ್ ಸೆನ್ಸರ್ಸ್, ಆರ್ಮಮೆಂಟ್' ಗ್ರೂಪ್‌ಗಳಿಗೆ ಮುಖಂಡರಾಗಿದ್ದೀರಿ, ಏರ್ ಕ್ರಾಫ್ಟ್ ಸಂಶೋಧನಾ ಮತ್ತು ವಿನ್ಯಾಸ ವಿಭಾಗದಲ್ಲಿ 'ಚೀಫ್ ಡಿಸೈನರ್' ಆಗಿದ್ದು, ಎಚ್.ಎಮ್.ಎ.ಯ ಜನರಲ್ ಮ್ಯಾನೇಜರ್ ಆಗಿ ಕಾರ್ಯ ನಿರ್ವಹಿಸಿದ್ದೀರಿ. ಈ ಕ್ಷೇತ್ರಗಳಲ್ಲಿನ ಅನುಭವ?**